# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

**"ಜ್ಞಾನ ಸಂಗಮ", ಬೆಳಗಾವಿ 590 018, ಕರ್ನಾಟಕ ರಾಜ್ಯ**

**ಫೋ: 0831–2405468** **ಫ್ಯಾಕ್ಸ್: 0831–2405467**

---

**ಉಲ್ಲೇಖ: ವಿತಾವಿ/ಬಿಜಿಎಂ/ಲಿಬ್/ ಕನ್ಸೋರ್ಟಿಯಂ/೨೦೨೧–೨೨/೪೨೦೧** **ದಿನಾಂಕ: ೦೯–೧೨–೨೦೨೧**

## ಅಧಿಸೂಚನೆ

**ಇ–ಸಂಪನ್ಮೂಲಗಳ ಚಂದಾದಾರಿಕೆಗಾಗಿ ಮೂಲ ಪ್ರಕಾಶಕರಿಂದ ಪ್ರಸ್ತಾವನೆಗಳ ಅಹ್ವಾನ**

---

ವಿಟಿಯು ಕನ್ಸೋರ್ಟಿಯಂ ಅಡಿಯಲ್ಲಿ ಭಾರತ ಮತ್ತು ವಿದೇಶದ ಮೂಲ ಪ್ರಕಾಶಕರಿಂದ ಎಂಜನಿಯರಿಂಗ್, ಟೆಕ್ನಾಲಜಿ, ಆರ್ಕಿಟೆಕ್ಚರ್, ಮ್ಯಾನೆಜ್ಮೆಂಟ್ ಮತ್ತು ಇತರೇ ತಾಂತ್ರಿಕ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಇ–ಸಂಪನ್ಮೂಲಗಳಾದ ಇ–ಬುಕ್ಸ್, ಇ–ಜರ್ನಲ್ಸ್, ಟೆಕ್ನಾಲಜಿ ಪ್ಲಾಟ್ ಫಾರ್ಮ್, ಮಲ್ಟಿಮೀಡಿಯಾ ಮತ್ತು ಇ–ಲರ್ನಿಂಗ ಸಂಪನ್ಮೂಲಗಳನ್ನು ವಿಟಿಯು ಕನ್ಸೋರ್ಟಿಯಂನ ಸದಸ್ಯ ಮತ್ತು ಸಹ ಸದಸ್ಯರುಗಳಿಗೆ ಚಂದಾದಾರಿಕೆಗಾಗಿ ಪ್ರಸ್ತಾಪಗಳನ್ನು ಈ ಮೂಲಕ ಅಹ್ವಾನಿಸಲಾಗಿದೆ. ಸನ್೨೦೨೧–೨೨ನೇ ಸಾಲಿನ ವಿತಾವಿ ಒಕ್ಕೂಟಕ್ಕೆ ಈಗಾಗಲೇ ಇ–ಸಂಪನ್ಮೂಲಗಳನ್ನು ಪೂರೈಸಿದ ಪ್ರಕಾಶಕರು ಸಹ ತಮ್ಮ ಇ–ಸಂಪನ್ಮೂಲಗಳ ನವೀಕರಣಕ್ಕಾಗಿ ೨೦೨೨–೨೩ನೇ ಸಾಲಿಗೆ ಅತ್ಯಂತ ರಿಯಾಯಿತಿ ದರದಲ್ಲಿ ನವೀಕರಣದ ಪ್ರಸ್ತಾವನೆಗಳನ್ನು ಕಳಿಸುವುದು. ತಮ್ಮ ಪ್ರಸ್ತಾವನೆಗಳು ೧–೫೦, ೫೧–೧೦೦, ೧೦೧–೧೫೦, ಮತ್ತು ೧೫೦ ಮತ್ತು ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಕಾಲೇಜುಗಳ ಸಂಖ್ಯೆಗೆ ಅನುಗುಣವಾಗಿ ಬೆಲೆಗಳ ವಿವರಗಳೊಂದಿಗೆ ವಿತಾವಿಯ ಬೋರ್ಡ್ ಆಫ್ ಸ್ಟಡೀಸ್ ವಿಷಯಗಳಿಗೆ ಅನುಸಾರವಾಗಿರುವ ಇ–ಸಂಪನ್ಮೂಲಗಳ ಪಟ್ಟಿಯ ಪ್ರಸ್ತಾವನೆಗಳು ಒಳಗೊಂಡಿರಬೇಕು. ಹೆಚ್ಚಿನ ಮಾಹಿತಿಗಾಗಿ ವಿತಾವಿ ಜಾಲತಾಣವನ್ನು ಉಲ್ಲೇಖಿಸಬಹುದು, ಪ್ರತಿ ವಿಷಯ ಮಂಡಳಿಯ ಅಡಿಯಲ್ಲಿ ವಿಷಯದ ವ್ಯಾಪ್ತಿಯ ವಿವರಗಳನ್ನು ಸಹ ಒದಗಿಸಲಾಗಿದೆ. ನಿಮ್ಮ ಎಲ್ಲಾ ಪ್ರಸ್ತಾವನೆಗಳನ್ನು **ಕುಲಸಚಿವರು, ವಿಟಿಯು, "ಜ್ಞಾನ ಸಂಗಮ", ಬೆಳಗಾವಿ – ೫೯೦೦೧೮, ಕರ್ನಾಟಕ,** ವಿಳಾಸಕ್ಕೆ ತಿಳಿಸಲಾದ ಪ್ರಸ್ತಾವನೆಗಳನ್ನು ದಿನಾಂಕ ೦೧/೦೧/೨೦೨೨ ರಂದು ಸಂಜೆ ೫–೩೦ ರ ಮೊದಲು ತಲುಪಿಸುವುದು. ಪೋಸ್ಟಲ್ ಕವರ್ ಮೇಲೆ "ವಿಟಿಯು ಕನ್ಸೋರ್ಟಿಯಂ–೨೦೨೨–೨೩ ರ ಚಂದಾದಾರಿಕೆ/ನವೀಕರಣ/ಇ–ಸಂಪನ್ಮೂಲಗಳ ಖರೀದಿಗೆ ಪ್ರಸ್ತಾವನೆಗಳು" ಎಂದು ಬರೆಯಬೇಕು. ಪ್ರಸ್ತಾವನೆಯ ಸ್ವರೂಪವನ್ನು ವೆಬ್ ಸೈಟ್: www.vtu.ac.in ನಿಂದ ಪಡೆಯಬಹುದು.

---

**ಸಹಿ**

**ಕುಲಸಚಿವರು**